(50)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸುನೀಲ್ ವಲ್ಯಾಪುರ್ ಇವರು ನಿಯಮ 72 ರಡಿ ನೀಡಿರುವ ಗಮನ ಸೆಳೆಯುವ ಸೂಚನಾ ಪತ್ರದ ವಿಷಯಕ್ಕೆ ಉತ್ತರ:**

*********

**ಪ್ರಶ್ನೆ:**

ಖಾಸಗಿ ಪಟ್ಟಾ ಲ್ಯಾಂಡ್ ಜಾಗದಲ್ಲಿ ಗುತ್ತಿಗೆ ಆಧಾರದಲ್ಲಿ ಪರವಾನಿಗೆ ಪಡೆದು ಮರಳು ಗಣಿಗಾರಿಕೆ ಮಾಡುತ್ತಿರುವವರು ಕನಿಷ್ಠ ಮರಳು ತೆಗೆಯದೆ ಹಾಗೆ ಉಳಿದಿದ್ದವರಿಗೆ ಅವಧಿ ಮುಗಿದ ಮೇಲೆ ಪರವಾನಿಗೆ ಒಂದು ವರ್ಷ ಮುಂದೂಡಲು ಅವಕಾಶ ಮಾಡುವುದು ಮತ್ತು ಪಟ್ಟ ಲ್ಯಾಂಡ್ ಗೆ ಪರವಾನಿಗೆಯನ್ನು 05 ವರ್ಷಗಳಿಗೆ ನೀಡಿದ್ದು, ಇನ್ನುಳಿದ ಜಾಗಗಳಿಗೆ 30 ವರ್ಷಗಳ ಪರವಾನಿಗೆಯನ್ನು ನೀಡುವ ಮೂಲಕ ಅನುಸರಿಸಿರುವ ಇಬ್ಬಗೆ ನೀತಿಯ ಕುರಿತು.

**ಉತ್ತರ:**

- ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2021ರ ನಿಯಮ 31-Z (6) ರಲ್ಲಿ, "The maximum period of such licence shall be for five years or till the sand exhaust, whichever is earlier" ಎಂದು ಉಲ್ಲೇಖಿಸಲಾಗಿರುತ್ತದೆ. ಅದರಂತೆ, ಪ್ರಸ್ತುತ ಪಟ್ಟಾ ಜಮೀನುಗಳಲ್ಲಿ ಲಭ್ಯವಿರುವ ಮರಳಿನ ಪ್ರಮಾಣದ ಆಧಾರದ ಮೇಲೆ ಜಿಲ್ಲಾ ಮರಳು ಸಮಿತಿಯಿಂದ ಕನಿಷ್ಠ 03 ರಿಂದ ಗರಿಷ್ಠ 05 ವರ್ಷಗಳ ಅವಧಿಯವರೆಗೆ ಮರಳು ಗಣಿಗಾರಿಕೆಗೆ ಪಟ್ಟಾದಾರರಿಗೆ ಅಥವಾ ಪಟ್ಟಾದಾರರಿಂದ ಒಪ್ಪಿಗೆ ಪಡೆದಿರುವ ವ್ಯಕ್ತಿ / ಸಂಸ್ಥೆಗಳಿಗೆ ಲೈಸನ್ಸ್ ನೀಡಲಾಗುತ್ತಿದೆ.
- ಸದರಿ ನಿಯಮದಂತೆ, ಪಟ್ಟಾ ಜಮೀನುಗಳಲ್ಲಿ ಮರಳು ಗಣಿಗಾರಿಕೆಗೆ ಅರ್ಜಿತ ಪ್ರದೇಶದಲ್ಲಿ ಲಭ್ಯವಿರುವ ಮರಳಿನ ಪ್ರಮಾಣದ ಆಧಾರದ ಮೇಲೆ ಲೈಸನ್ಸ್ ಗಳನ್ನು ಕನಿಷ್ಠ 03 ರಿಂದ 05 ವರ್ಷಗಳ ಅವಧಿಗೆ ಮಂಜೂರು ಮಾಡಲಾಗಿರುತ್ತದೆ. ಮಳೆಗಾಲ, ಪ್ರವಾಹ ಇತ್ಯಾದಿ ನೈಸರ್ಗಿಕ ವಿಕೋಪಗಳಿಂದಾಗಿ ಮರಳು ಗಣಿಗಾರಿಕೆ ನಡೆಸಲು ಸಾಧ್ಯವಾಗದೇ ಇರುವ ಕಾರಣ ಮರಳು ಲೈಸನ್ಸ್ ಪ್ರದೇಶಗಳಲ್ಲಿ ಉಳಿದಿರುವ ಮರಳು ನಿಕ್ಷೇಪವನ್ನು ತೆಗೆಯಲು ಸದರಿ ಲೈಸನ್ಸ್ ಅವಧಿಯನ್ನು ವಿಸ್ತರಿಸಲು ಲೈಸನ್ಸ್ ದಾರರುಗಳು ಕೋರಿರುತ್ತಾರೆ. ಪ್ರಸ್ತುತ ನಿಯಮಗಳಲ್ಲಿ ಮರಳು ಗಣಿಗಾರಿಕೆ ಲೈಸನ್ಸ್ ಅವಧಿ ವಿಸ್ತರಣೆಗೆ ಅವಕಾಶವಿರುವುದಿಲ್ಲ.
- ದಿನಾಂಕ 17.03.2023 ರಂದು ಕರ್ನಾಟಕ ಉಪ ಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023ನ್ನು ಜಾರಿಗೆ ತಂದಿದ್ದು, ಉಪಖನಿಜ ಗಣಿ ಗುತ್ತಿಗೆ ಪ್ರದೇಶಗಳಲ್ಲಿ ಖನಿಜ ಲಭ್ಯತೆ ಮತ್ತು ಗಣಿಗಾರಿಕೆಗೆ ಕಾರ್ಯಸಾಧುವಿದ್ದಲ್ಲಿ ನಿರ್ದಿಷ್ಟ ಉಪಖನಿಜ ಗುತ್ತಿಗೆಗಳ ಅವಧಿಯನ್ನು 50 ವರ್ಷಗಳಿಗೆ ಹಾಗೂ ನಿರ್ದಿಷ್ಟವಲ್ಲದ ಉಪಖನಿಜಗಳ ಗುತ್ತಿಗೆಗಳ ಅವಧಿಯನ್ನು 30 ವರ್ಷಗಳ ಅವಧಿಗೆ ಮಂಜೂರು ಮಾಡಲು ಹಾಗೂ ಈ ದಿನಾಂಕದ ಪೂರ್ವದಲ್ಲಿ ಮಂಜೂರು ಮಾಡಲಾಗಿದ್ದ ನಿರ್ದಿಷ್ಟ ಉಪಖನಿಜ ಗುತ್ತಿಗೆಗಳನ್ನು ಖನಿಜ ಲಭ್ಯತೆ ಮತ್ತು ಗಣಿಗಾರಿಕೆಗೆ ಕಾರ್ಯಸಾಧುವಿದ್ದಲ್ಲಿ ಮೂಲ ಗುತ್ತಿಗೆ ಮಂಜೂರಾದ ದಿನಾಂಕದಿಂದ 50 ವರ್ಷಗಳಿಗೆ ಹಾಗೂ ನಿರ್ದಿಷ್ಟವಲ್ಲದ ಉಪಖನಿಜಗಳ ಗುತ್ತಿಗೆಗಳನ್ನು 30 ವರ್ಷಗಳಅವಧಿಗೆ ವಿಸ್ತರಿಸಲು ಅವಕಾಶ ಕಲ್ಪಿಸಿದೆ.
- ಪಟ್ಟಾ ಜಮೀನುಗಳಲ್ಲಿ ಮರಳು ಗಣಿಗಾರಿಕೆಗೆ ಪರವಾನಗಿ ಪಡೆದ ಪ್ರದೇಶಗಳಲ್ಲಿ ನೈಸರ್ಗಿಕ ವಿಕೋಪಗಳು ಹಾಗೂ ಸ್ಥಳೀಯ ಸಮಸ್ಯೆಗಳಿಂದ ಲೈಸನ್ಸ್ ಅವಧಿಯು ಮುಕ್ತಾಯಗೊಂಡ ನಂತರವೂ ಮರಳಿನ ನಿಕ್ಷೇಪ ಲಭ್ಯತೆ ಇದ್ದಲ್ಲಿ, ನಿಗದಿತ ಆಳದವರೆಗೆ ಖನಿಜದ ಲಭ್ಯತೆಯನ್ನು ಪರಿಶೀಲಿಸಿ, ಖಚಿತಪಡಿಸಿಕೊಂಡು ಲೈಸನ್ಸ್ ಅವಧಿ ಮುಕ್ತಾಯವಾದ ದಿನಾಂಕದಿಂದ ಗರಿಷ್ಟ ಅವಧಿಗೆ ಪರವಾನಗಿಯನ್ನು ವಿಸ್ತರಿಸುವ ಕುರಿತು ಸಾಧಕ ಭಾಧಕಗಳನ್ನು ಪರಿಶೀಲಿಸಿ, ಕ್ರಮ ವಹಿಸಲಾಗುವುದು.

ಸಂಖ್ಯೆ ಸಿಐ -ಎಂಎಂಎನ್/302/2024

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.